ನಮ್ಮ ಅನಿಸಿಕೆ ಏನು ಇತ್ತು ಅದೇ ಸಲಹೆಯನ್ನು ಇವತ್ತು ಸುಪ್ರೀಂ ಕೋರ್ಟಿನಲ್ಲಿ ಮಾಡಿದ್ದಾರೆ.

ಅದನ್ನು ಈಗಾಗಲೇ ಮುಖ್ಯಮಂತ್ರಿಗಳು ಸ್ವಾಗತ ಮಾಡಿದ್ದಾರೆ. ಅದೇರೀತಿಯಾಗಿ ತಾವು ಕೂಡ ಸ್ವಾಗತವನ್ನು ಕೋರಿದ್ದೀರಿ. ಅದಕ್ಕೆ ಈಗ ತಕ್ಷಣ ಕರೆಸಿ ಮಾತನಾಡಬೇಕು ಎನ್ನವುದರ ಬಗ್ಗೆ ಶ್ರೀ ವಾಟಾಳ್ ನಾಗರಾಜ್ ಅವರು ಶ್ರೀ ಸಿಂಧ್ಯಾ ಅವರು ಇನ್ನೂ ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ತಿಳಿಸುತ್ತೇನೆ. ಇದರ ಬಗ್ಗೆ ಅವರು ಕ್ರಮ ತೆಗೆದುಕೊಂಡು ತಮ್ಮ ಸಲಹೆ ಪಡೆದೇ ಮುಂದೆ ಹೋಗುತ್ತಾರೆ. ಏಕೆಂದರೆ ಅನೇಕ ಸಲ ಇಂತಹ ಸಮಸ್ಯೆ ಬಂದಾಗ ತಮ್ಮ ಜತೆ ಚರ್ಚೆ ಮಾಡಿದ್ದಾರೆ ಕರೆಸಿದ್ದಾರೆ ಮಾತನಾಡಿದ್ದಾರೆ. ಕೇಂದ್ರಸರ್ಕಾರಕ್ಕೆ ಮೆಮೊರೇಂಡಮ್ ಕೊಡುವಾಗಲೂ ಸಹ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇನೇ ಅವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇವತ್ತು ನಾವು ಆರ್ಡಿನೆನ್ಸ್ ಮಾಡಬೇಕಾದರೂ ಕೂಡ ತಮ್ಮೆಲ್ಲರ ಬೆಂಬಲದಿಂದ ವಿಶ್ವಾಸದಿಂದ ಮತ್ತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅದನ್ನು ಮಾಡಿದ್ದು ಇನ್ನು ಮುಂದಾದರೂ ಕೂಡ ತಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಪುನಃ ತಮ್ಮ ಮೂಲಕ ಅವರಿಗೆ ಹೇಳುತ್ತೇನೆ ನ್ನನ್ನ ಅನಿಸಿಕೆಯನ್ನು ಹೇಳಿದ್ದೇನೆ.

ಅಧ್ಯಕ್ಷರು : ಭಾವನಾತ್ಮಕವಾಗಿ ನಮ್ಮ ಮೂರು ರಾಜ್ಯಗಳನ್ನು ಸಂಘರ್ಷದ ಹಾದಿಗೆ ಕೊಂಡೊಯ್ಯುತ್ತಿರುವ ಈ ಕಾವೇರಿ ಜಲ ವಿವಾದದ ಬಗ್ಗೆ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯ ಮಾಡಿರುವ ಸಲಹೆಯನ್ನು ಸದನದ ಎಲ್ಲ ಭಾಗಗಳು ಸ್ವಾಗತಿಸಿರತಕ್ಕದ್ದು ಬಹಳ ಅರ್ಥಪೂರ್ಣವಾಗಿದೆ. ಅಂತರರಾಜ್ಯ ವಿವಾದಗಳಿಲ್ಲವನ್ನೂ ಕೂಡ ನೇರ ಸಂಧಾನ ಮತ್ತು ಮಾತುಕತೆಗಳಿಂದ ಬಗೆಹರಿಸಬೇಕು. ಅಂಥಾದರಲ್ಲಿ ರಾಜಕೀಯ ಮುತ್ಸದ್ದಿತನ ಇದೆ ಔಚಿತ್ಯ ಇದೆ. ಮತ್ತು ಈ ದೇಶದ ಅವಶ್ಯಕತೆಗಳಲ್ಲಿ ಅದು ಬಹಳ ಪ್ರಾಮುಖ್ಯವಾದದ್ದು ತಮಿಳುನಾಡು ಮತ್ತು ಕರ್ನಾಟಕ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಕನ್ಸಿಸ್ಟೆಂಟ್ ಆಗಿ ಒಂದು ನಿಲುವನ್ನು ತೆಗೆದುಕೊಂಡಿದೆ ಹಿಂದಿನ ಮುಖ್ಯಮಂತ್ರಿಗಳು ಮತ್ತು ಈಗಿನ ಮುಖ್ಯಮಂತ್ರಿಗಳು ಈ ಕಾವೇರಿ ವಿವಾದದ ಎಲ್ಲ ಪ್ರಾಕಾರಗಳನ್ನು ಕೂಡ ನೇರವಾಗಿ ತಮಿಳುನಾಡು ಮತ್ತು ಪಾಂಡಿಚೇರಿ ಜೊತೆಯಲ್ಲಿ ಮಾತನಾಡಿದ್ದಾರೆ ಅದನ್ನು ಬಗೆಹರಿಸಬೇಕು ಎನ್ನತಕ್ಕಂಥ ಬೆಂಬಲದಿಂದ ಕರ್ನಾಟಕ ಯಾವತ್ತೂ ಹಿಂದೆ ಹೋಗಿಲ್ಲ. ಈ ದಿವಸ ಮತ್ತೆ ಈ ಸದನ ಒಟ್ಟಾರೆ ಸದಭಿಪ್ರಾಯವನ್ನು ವ್ಯಕ್ತಪಡಿಸುತ್ತಿದೆ. ಈಗಾಗಲೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸಭಾನಾಯಕರು ಇದನ್ನು ಸ್ವಾಗತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಮಿಳುನಾಡು ಮತ್ತು ಪಾಂಡಿಚೇರಿ ರಾಜ್ಯಗಳು ಕೂಡ ಇದರ ಬಗ್ಗೆ ಇಂಥದ್ದೇ ಗಂಭೀರ ಮತ್ತು ರಚನಾತ್ಮಕ ಆಲೋಚನೆಯನ್ನು ಮಾಡುತ್ತವೆ ಎಂದು ಸಭೆಯ ಪರವಾಗಿ ನಾನು ನಿರೀಕ್ಷೆ ಮಾಡುತ್ತೇನೆ ಮತ್ತು ಹಾರೈಸುತ್ತೇನೆ.

ವಿಷಯ : ಎಸ್.ಎಸ್.ಎಲ್.ಸಿ. ಪರೀಕ್ಷೆ ಶುಲ್ಕವನ್ನು ಹೆಚ್ಚು ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ಕೆ.ಎಸ್ ಈಶ್ವರಪ್ಪ : ಇವತ್ತು ಬೆಳಿಗ್ಗೆ ತಾನೆ ನಾನು ಪ್ರಸ್ತಾಪ ಮಾಡಿದ್ದೇನೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕದ ವಿಚಾರದಲ್ಲಿ ಸರ್ಕಾರದಿಂದ ಒಂದು ಹೇಳಿಕೆ ಬಂದರೆ ತುಂಬಾ ಅನುಕೂಲ ಏಕೆಂದರೆ ಇದರಿಂದ ಇಡೀ ರಾಜ್ಯಕ್ಕೆ ತುಂಬ ತೊಂದರೆಯಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಅಧ್ಯಕ್ಷರೇ ಸಭೆಯಲ್ಲಿ ಕೋರಂ ಇಲ್ಲ

ಅಧ್ಯಕ್ಷರು : ಈಗ ಖಾಸಗಿ ಕಾರ್ಯಕಲಾಪ ಇದೆ, ಇದಕ್ಕೂ ಕೋರಂ ಬೇಕೇ

ಶ್ರೀ ಸಿ ಬೈರೇಗೌಡ : ಖಾಸಗಿ ಕಾರ್ಯಕಲಾಪವಾಗಲೀ ಯಾವುದೇ ಕಾರ್ಯ ಕಲಾಪ ವಾಗಲೀ ಕೋರಂ ಅವಶ್ಯಕತೆ ಇದೆಯೆಂದು ನನ್ನ ಭಾವನೆ.

ಅಧ್ಯಕ್ಷರು : ಹಾಗಾದಜಣ ಈಗ ಕೋರಂ ಬೆಲ್ ಹಾಕಿಸಲೇನು ಗ್ರಾನೈಟ್ ಕಲ್ಲುಗಳ ನಿರ್ಣಯ ಇದೆ. ಈಗ ಈ ಕಲ್ಲು ಎಲ್ಲಾವೂ ನನ್ನ ಜೂರಿಸ್ಟ್ಡಿಕ್ಷನ್ ಬಂದಿದೆ.

ಶ್ರೀ ಸಿ. ಬೈರೇಗೌಡ : ಸೋಮವಾರ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಗ್ರಾನೈಟ್ ಕಲ್ಲುಗಳ ವಿಚಾರವನ್ನು ತಮ್ಮ ಕಡೆ ಕೊಟ್ಟಿದ್ದೇವೆ. ತಮ್ಮ ನಿರ್ಧಾರ ಆದಮೇಲೆ ಈ ನಿರ್ಣಯಕ್ಕೆ ಒಂದು ನಿರ್ಧಾರ ಹೇಳಿಬಿಡೋಣ ಆಮೇಲೆ ಎಸ್.ಎಸ್.ಎಲ್.ಸಿ ಪರೀಕ್ಷಾ ಶುಲ್ಕವನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ರಾಜ್ಯದ ಮೂಲೆ ಮೂಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ದಯಮಾಡಿ ಒಂದು ಹೇಳಿಕೆ ಕೊಡಿ ಈ ಬಗ್ಗೆ ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ

ಶ್ರೀ ಕೆ.ಎಸ್.ಈಶ್ವರಪ್ಪ : ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಮುಂದೆ ನಲವತ್ತೊಂದುವರೆ ರೂಪಾಯಿ ಇತ್ತು ಈಗ 85 ರೂಪಾಯಿ ಆಗಿದೆ. ಆಗಿದೆ. ಅಪ್ಲಿಕೇಷನ್ ಫೀ 1 ರೂಪಾಯಿ ಇತ್ತು ಈಗ 10 ರೂಪಾಯಿ ಮಾಡಿದ್ದಾರೆ. ರಿಸಲ್ಟ್ ಇಂಟಿಮೇಷನ್ ಫೀ 50ಪೈಸೆ ಇತ್ತು ಈಗ5ರೂಪಾಯಿ ಮಾಡಿದ್ದಾರೆ. ಎನ್‌ರೋಲ್‌ಮೆಂಟ್ ಫೀ 1987ಕ್ಕೆ ಮುಂದೆ 5 ರೂಪಾಯಿ ಇತ್ತು 1987ರ ನಂತರ 50 ರೂಪಾಯಿ ಆಯಿತು ಈಗ 100 ರೂಪಾಯಿ ಆಗಿದೆ. ಇದರಿಂದ 18 ವರ್ಷದ ಮೇಲ್ಪಟ್ಟು ಎಲ್ಲಾ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆ. ಇವತ್ತು ಕೂಡ ಪಿ.ಯು.ಸಿ.ಗೆ 30 ರೂಪಾಯಿ ಮಾತ್ರ ಪರೀಕ್ಷಾ ಶುಲ್ಕ ಇದೆ. ಮತ್ತು ಸರ್ಕಾರದವರು ಉಚಿತ ವಿದ್ಯಾಭ್ಯಾಸ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ದಯಮಾಡಿ ಮುಂದೆ ಏನಿತ್ತು ಅದೇ ದರಕ್ಕೆ ಪರೀಕ್ಷಾ ಶುಲ್ಕವನ್ನು ನಿಗದಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀರು ವಿದ್ಯುತ್ ಮತ್ತು ಆಹಾರದ ದರಗಳನ್ನು ಏರಿಸಿದಹಾಗೆ, ಇದನ್ನೂ ಏರಿಸುವುದಕ್ಕೆ ಹೊರಟರೆ ಅದಕ್ಕೆ ಬೆಲೆ ಬೇಡವೇ ಅವರು ಏರಿಸುತ್ತಾರೆ ನಾವು ಏಕೆ ಏರಿಸಬಾರದೆಂದು ತಾವು ಯೋಚನೆ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ ಈ ಎಸ್.ಎಸ್.ಎಲ್.ಸಿ ಪರೀಕ್ಷಾ ಶುಲ್ಕ 1987ನೇ ಇಸವಿಯಲ್ಲಿ ರಿವೈಸ್ ಆಗಿದೆ. 1987 ಎಂದು ಹೇಳಿದರೆ ಈಗಾಗಲೇ ಸುಮಾರು 4 ವರ್ಷವಾಗಿದೆ. ಸಾಮಾನ್ಯವಾಗಿ ಅದನ್ನು ಮೂರು ವರ್ಷಕ್ಕೊಮ್ಮೆ ರಿವೈಸ್ ಮಾಡುತ್ತಾರೆ ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿಯ ವ್ಯವಸ್ಥೆ ಏನಿದೆ ಅದಕ್ಕೆ ಹಣಕಾಸಿನ ಇಲಾಖೆಯಿಂದ ಕೊಡುವುದಿಲ್ಲ ನಿಮ್ಮ ಹಣವನ್ನು ನೀವೇ ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಪರೀಕ್ಷೆ ನಡೆಸುವುದಕ್ಕೆ ಎಷ್ಟು ಖರ್ಚಾಗುತ್ತದೆ ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ನೀವೇ ಹೊಂದಿಸಿಕೊಳ್ಳಬೇಕೆಂದು ಹಣಕಾಸಿನ ಇಲಾಖೆಯಿಂದ ಆದೇಶ ಬಂದಿದೆ. ಅದಕ್ಕೋಸ್ಕರ ಮೂರು ವರ್ಷಕ್ಕೊಮ್ಮೆ ಅವರು ಪರಿಷ್ಕರಣೆ ಮಾಡುತ್ತಾ ಇರುತ್ತಾರೆ. ಅದೇಪ್ರಕಾಶ ಈಗಲೂ ಪರಿಷ್ಕರಣೆ ಮಾಡಿದ್ದಾರೆ. ಇದು ಅನುಷ್ಠಾನಕ್ಕೆ

ಬರುವುದು ಮಾರ್ಚ್ 1992 ಕ್ಕೆ, ಈ ಪರೀಕ್ಷೆಗೆ ಅಲ್ಲ, ತಾವು ಇದು ಜಾಸ್ತಿಯಾಗಿದೆಯೆಂದು ಎಂದು ಹೇಳುತ್ತಿದೀರಿ. ಇದನ್ನು ವಿಚಾರ ಮಾಡಿ, ಇದನ್ನು ಹಿಂದಿನ ಸ್ಥಾನಕ್ಕೆ ತಂದಿರಬೇಕೆಂದು ಹೇಳಿದರೆ ಕಷ್ಟವಾಗುತ್ತದೆ. ತಾವೂ ಕೂಡ ಆಲೋಚನೆ ಮಾಡಬೇಕು, ಪರೀಕ್ಷಾ ಮಂಡಳಿಯವರು ಅವರ ಸಂಪನ್ಮೂಲವನ್ನು ಅವರೇ ಒದಗಿಸಿಕೊಳ್ಳಬೇಕಾದ ಕಾರಣದಿಂದ ಅವರಿಗೆ ಬೇರೆ ಸಂಪನ್ಮೂಲಕ್ಕೆ ದಾರಿಯೇ ಇಲ್ಲ ಇಷ್ಟು ಮಾಡಿದರೂ ಕೂಡ 4 ಲಕ್ಷ ರೂಪಾಯಿ ಡೆಫಿಸಿಟ್ ಆಗುತ್ತದೆ. ಮಾನ್ಯ ಸದಸ್ಯರು ಇದು ವಿಪರೀತ ಜಾಸ್ತಿಯಾಯಿತೆಂದು ಹೇಳುತ್ತಿದ್ದೀರಿ. ಇದನ್ನು ನಾನು ಪುನಃ ಪರಿಶೀಲನೆ ಮಾಡುತ್ತೇನೆ. ಇದು ಅಕ್ಟೋಬರ್ ಪರೀಕ್ಷೆಗೆ ಜಾರಿಗೆ ಬರುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗದಲ್ಲಿ ಮುಷ್ಕರ ಪ್ರಾರಂಭವಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮುಷ್ಕರಕ್ಕೆ ಅವಕಾಶ ಕೊಡದೇ ಇದನ್ನು ಪುನರ್‌ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಮುಷ್ಕರಕ್ಕೆ ಕಾರಣ ಇಲ್ಲ, ನೀವು ಇವತ್ತೇ ಹೋಗಿ ಮುಷ್ಕರವನ್ನು ನಿಲ್ಲಿಸಿಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಈಗಾಗಲೇ ಹೊರಟಿ.

ಅಧ್ಯಕ್ಷರು : ಹುಟ್ಟುಹಬ್ಬದ ಶುಭಾಶಯಗಳು. ನಮ್ಮ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಹುಟ್ಟಿದ ದಿವಸ ಸದನದ ಎಲ್ಲಾ ಸದಸ್ಯರ ಪರವಾಗಿ ಹಾಗೂ ನನ್ನ ಪರವಾಗಿ ಅವರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಈಗ ಸದನ ಮುಂದುವರೆದು ಸೋಮವಾರ ಮಧ್ಯಾಹ್ನ 12ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು, ಮಧ್ಯಾಹ್ನ ಒಂದು ಗಂಟೆ 55 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 9ನೇ ಸೆಪ್ಟೆಂಬರ್ ಮಾಹೆ 1991ರ ಸೋಮವಾರದಂದು ಮಧ್ಯಾಹ್ನ 12 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)